ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 164

2) ಸದಸ್ಯರ ಹೆಸರು : ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)

3) ಉತ್ತರಿಸಬೇಕಾದ ದಿನಾಂಕ : 18-08-2026

4) ಉತ್ತರಿಸಬೇಕಾದ ಸಚಿವರು : ಮುಜರಾಯಿ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	ಹಲವಾರು ವರ್ಷಗಳಿಂದ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಹೊರ ರಾಜ್ಯದ ಮೀನುಗಾರರು ಅಕ್ರಮವಾಗಿ ಮೀನುಗಾರಿಕೆ ಮಾಡುತ್ತಿದ್ದು, ಇದರಿಂದ ಉದ್ಯೋಗವಿಲ್ಲದೇ ಸ್ಥಳೀಯ ಸುತ್ತಮುತ್ತಲಿನ ನದಿ ಪ್ರದೇಶದ ಮೀನುಗಾರರು ಪರದಾಡುವಂತಹ ಪರಿಸ್ಥಿತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಒಳನಾಡು ಗುತ್ತಿಗೆ ಕಾರ್ಯನೀತಿ-2014 ರಂತೆ ಪರವಾನಿಗೆಗಳನ್ನು ಜಲಸಂಪನ್ಮೂಲಗಳ ಸುತ್ತಮುತ್ತಲಿನ 5 ಕಿ.ಮೀ. ಒಳಗಡೆ ವಾಸಿಸುವ ಮೀನುಗಾರರಿಗೆ ನೀಡಲಾಗುತ್ತಿದೆ. ಹೊರ ರಾಜ್ಯದ ಮೀನುಗಾರರಿಗೆ ಪರವಾನಿಗೆಗಳನ್ನು ವಿತರಿಸುವುದಿಲ್ಲ. ಆದರೆ, ಇತ್ತೀಚೆಗೆ ಕೆಲವು ಮೀನುಗಾರರು ಅಕ್ರಮವಾಗಿ ಆಲಮಟ್ಟಿ ಜಲಾಶಯದಲ್ಲಿ ಮೀನುಗಾರಿಕೆ ಮಾಡುತ್ತಿರುವ ಬಗ್ಗೆ ಇಲಾಖೆಯ ಗಮನಕ್ಕೆ ಬಂದ ಕೂಡಲೇ ಅಧಿಕಾರಿಗಳು ಸ್ಥಳೀಯ ಪೋಲೀಸ್‌ರವರ ಸಹಕಾರದೊಂದಿಗೆ ದಾಳಿ ಮಾಡಿ ದೋಣಿ, ಬಲೆ ಮತ್ತು ಹರಿಗೋಲುಗಳನ್ನು ವಶಪಡಿಸಿಕೊಂಡು ಪೋಲೀಸ್ ಠಾಣೆಯಲ್ಲಿ ಮತ್ತು ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗಿರುತ್ತದೆ. ಸ್ಥಳೀಯ ಅಧಿಕಾರಿಗಳಿಗೆ ಆಗಿಂದ್ದಾಗ್ಗೆ ಅನಿರೀಕ್ಷಿತ ಭೇಟಿ ನೀಡಲು ಹಾಗೂ ಈ ರೀತಿ ಅಕ್ರಮ ಮಾಡದಂತೆ ಜಾಗೃತಿ ಮೂಡಿಸಿ ಎಚ್ಚರಿಕೆ ನೀಡಲು ಸೂಚಿಸಿದೆ. ಹೊರ ರಾಜ್ಯದ ಮೀನುಗಾರರಿಗೆ ಕೂಡಲೇ ಜಲಾಶಯದ ವ್ಯಾಪ್ತಿಯನ್ನು ಬಿಟ್ಟು ತೆರಳುವಂತೆ ಎಚ್ಚರಿಕೆ ನೀಡಲಾಗಿದೆ.
ಆ)	ಅಕ್ರಮವಾಗಿ ಮೀನು ಹಿಡಿಯುವವರ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು; ಅದಕ್ಕಾಗಿ ಸರ್ಕಾರ ರೂಪಿಸಿರುವ ಕಾನೂನು ನಿಯಮಾವಳಿಗಳೇನು; ಇಲ್ಲಿಯವರೆಗೆ ಎಷ್ಟು ಜನರ ಮೇಲೆ ಕ್ರಮ ಜರುಗಿಸಲಾಗಿದೆ;	ಅಕ್ರಮವಾಗಿ ಮೀನು ಹಿಡಿಯುವವರ ವಿರುದ್ಧ ಕಾನೂನಾತ್ಮಕವಾಗಿ ಕ್ರಮ ಕೈಗೊಳ್ಳಲು ಪ್ರಸ್ತುತ ಮೀನುಗಾರಿಕೆ ನೀತಿಯಲ್ಲಿ ಅವಕಾಶವಿರುವುದಿಲ್ಲ. ಆದಾಗ್ಯೂ, ಸಾರ್ವಜನಿಕ ಸ್ವತ್ತುಗಳನ್ನು ಕಳ್ಳತನ ಮಾಡಿದ ಆರೋಪದಡಿ ಅಕ್ರಮ ಮೀನುಗಾರಿಕೆ ಮಾಡುತ್ತಿದ್ದ ಹೊರರಾಜ್ಯದ ಒಟ್ಟು 7 ಮೀನುಗಾರರ ಮೇಲೆ ಒಟ್ಟು 2 ಮೊಕದ್ದಮೆಗಳನ್ನು ದಾಖಲಿಸಲಾಗಿದೆ.

ಇ)	ಮೀನುಗಾರಿಕೆ ಉದ್ಯೋಗದಲ್ಲಿ ಸ್ಥಳೀಯರನ್ನು ಪ್ರೋತ್ಸಾಹಿಸಲು ಅನೇಕ ರೀತಿಯ ಬೇಡಿಕೆಗಳನ್ನು ಇಟ್ಟಿದ್ದು, ಅವುಗಳನ್ನು ಈಡೇರಿಸಲು ಸರ್ಕಾರ ಹಾಕಿಕೊಂಡ ಕಾರ್ಯಕ್ರಮಗಳೇನು? (ವಿವರ ನೀಡುವುದು)	ಬಾಗಲಕೋಟೆ ಜಿಲ್ಲೆಯ ಆಲಮಟ್ಟಿ ಹಿನ್ನೀರು ಪ್ರದೇಶಕ್ಕೆ ಹೊಂದಿಕೊಂಡಿರುವ ಬಾಗಲಕೋಟೆ, ಬೀಳಗಿ ಮತ್ತು ಜಮಖಂಡಿ ತಾಲ್ಲೂಕುಗಳಲ್ಲಿ ಮೀನುಗಾರಿಕೆಗೆ ಅತ್ಯಾವಶ್ಯಕವಾದ ಮೂಲ ಸೌಕರ್ಯಗಳನ್ನು ಒದಗಿಸಲು ಹಾಗೂ ಆಲಮಟ್ಟಿ ಸಂತ್ರಸ್ತರಿಗೆ ಮೀನುಗಾರಿಕೆ ಕುರಿತು ತರಬೇತಿ ನೀಡಿ, ಆಸಕ್ತರಿಗೆ ಮೀನುಗಾರಿಕೆ ಸಲಕರಣೆಗಳನ್ನು ಉಚಿತವಾಗಿ ವಿತರಿಸಲು 2026-27ನೇ ಸಾಲಿನ ವಿಶೇಷ ಘಟಕ ಯೋಜನೆ / ಗಿರಿಜನ ಉಪ ಯೋಜನೆಯಡಿ ಒಟ್ಟು ಅಂದಾಜು ರೂ.17.98 ಕೋಟಿಯ ಪ್ರಸ್ತಾವನೆ ತಯಾರಿಸಿ ಸಮಾಜ ಕಲ್ಯಾಣ ಇಲಾಖೆಯ ಅನುಮೋದನೆಗೆ ಸಲ್ಲಿಸಿದೆ. ಅನುಮೋದನೆ ದೊರೆತನಂತರ ಮುಂದಿನ ಕ್ರಮ ವಹಿಸಲಾಗುವುದು.

ಸಂಖ್ಯೆ: ಪಸಂಮೀ ಇ-88 ಮೀಇಇ 2026

(ಕೆ.ಎಸ್. ಬಸವಂತಪ್ಪ)
ಮುಜರಾಯಿ, ಮೀನುಗಾರಿಕೆ, ಬಂದರು
ಮತ್ತು ಒಳನಾಡು ಜಲಸಾರಿಗೆ ಸಚಿವರು